ದಿನಾಂಕಃ26-03-2021

ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀಸವಾಲು ಪ್ರತಿವಾದಿ ಪರ ವಕೀಲರಿಂದಃ

2004 ರಲ್ಲಿ ಅಳತೆ ಮಾಡಿಸಿದ ಬಗ್ಗೆ ನಕ್ಷೆ ನನ್ನ ಬಳಿ ಇರುವುದಿಲ್ಲ. ಸದರಿ ನಕ್ಷೆಯನ್ನು ಡಿಡಿಎಲ್ಆರ್ ರವರ ಮುಂದೆ ಅಪೀಲಿನಲ್ಲಿ ಹಾಜರುಪಡಿಸಿರುತ್ತೇನೆ. ಸದರಿ ಅಪೀಲಿನಲ್ಲಿ ಹೊಸದಾಗಿ ಸರ್ವೆ ಮಾಡುವಂತೆ ಹೇಳಿ ಕಡತವನ್ನು ತಹಶೀಲ್ದಾರವರ ಕಚೇರಿಗೆ ವಾಪಾಸ್ ಕಳುಹಿಸಿರುತ್ತಾರೆ. 2004 ರಲ್ಲಿ ಒತ್ತುವರಿಯ ಬಗ್ಗೆ ಅಳತೆ ಮಾಡಿಸಿದಾಗ ಪೂರ್ವ ಪಶ್ಚಿಮವಾಗಿ ಉತ್ತರದಲ್ಲಿ 24 ಲಿಂಕ್ ಗಳು ಒತ್ತುವರಿ ಆಗಿರುತ್ತದೆ ಎಂದು ತಿಳಿದಿರುತ್ತವೆ ಸದರಿ 24 ಲಿಂಕ್ ಎಂದರೆ ಸುಮಾರು 18 ಅಡಿ. ದಕ್ಷಿಣದ ಕಡೆಗೆ 16 ಲಿಂಕ್ ಅಂದರೆ 12 ಅಡಿ ಒತ್ತುವರಿಯಾಗಿರುತ್ತದೆ. 2005 ರಲ್ಲಿ ಪುನಃ ಜಮೀನಿನ ಅಳತೆ ಮಾಡಲಾಗಿರುತ್ತದೆ. ಸದರಿ ಅಳತೆಯಲ್ಲಿಯೂ ಸಹ ಮೇಲೆ ಹೇಳಿದಂತೆ ಒತ್ತುವರಿಯಾಗಿರುತ್ತದೆ ಎಂದು ತಿಳಿಸಿರುತ್ತಾರೆ.

ಸದರಿ ಅಳತೆ 2004-05 ರಲ್ಲಿ ಆದ ಬಗ್ಗೆ ಹಾಗೂ ಒತ್ತುವರಿಯ ವಿಚಾರವನ್ನು ನಾನು ನನ್ನ ವಾದ ಪತ್ರದಲ್ಲಿ ಹೇಳಿ ಬರೆಸಿರುವುದಿಲ್ಲ. 2007 ರಲ್ಲಿ ಪುನಃ ಜಮೀನಿನ ಅಳತೆ ಮಾಡಿಸಿರುತ್ತೇನೆ. ಸದರಿ ಅಳತೆಯೂ ಬಗ್ಗೆ ಸಹ ನನ್ನ ಬಳಿ ದಾಖಲೆ ಇರುವುದಿಲ್ಲ. 2013 ರ ಜನವರಿ ತಿಂಗಳಿನಲ್ಲಿ ಪುನಃ ಜಮೀನಿನ ಅಳತೆ ಮಾಡಲು ಅರ್ಜಿ ಸಲ್ಲಿಸಿದ್ದೆನು. ಸದರಿ ಸರ್ವೆ ಅಧಿಕಾರಿಗಳು 2015 ರಲ್ಲಿ ಸರ್ವೆ ಸಂಬಂದ ನೋಟಿಸ್ ನೀಡಿರುತ್ತಾರೆ. ದಾವೆಯನ್ನು ಸಲ್ಲಿಸುವ ಸಮಯದಲ್ಲಿ ಜಮೀನಿನಲ್ಲಿ ಒತ್ತುವರಿ ಆಗಿರುವ ಬಗ್ಗೆ ಯಾವುದೆ ದಾಖಲೆಗಳು ನನ್ನ ಬಳಿ ಇರಲಿಲ್ಲ. ದಾವಾ ಜಮೀನಿನ ಪೂರ್ವ ಭಾಗದಲ್ಲಿ ಉತ್ತರ ದಕ್ಷಿಣವಾಗಿ ಅಂದಾಜು ಸುಮಾರು 200-300 ಅಡಿ ಉದ್ದ ಇರಬಹುದು. ಸದರಿ ಭಾಗದಲ್ಲಿ ಪ್ರತಿವಾದಿಯವರ ಜಮೀನು ಮಾತ್ರ ಬರುತ್ತದೆ ಬೇರೆ ಯಾರ ಜಮೀನು ಬರುವುದಿಲ್ಲ.

ದಾವೆ ಸಲ್ಲಿಸುವ ಸಮಯದಲ್ಲಿ ಪೂರ್ವ ಪಶ್ಚಿಮವಾಗಿ 8 ಅಡಿ ಮತ್ತು ಉತ್ತರ ದಕ್ಷಿಣವಾಗಿ 50 ಅಡಿ ಒತ್ತುವರಿ ಆಗಿದೆ ಎಂದು ಹೇಳಲಾಗಿದೆ ಎಂದರೆ ಸರಿ. ಸದರಿ ಒತ್ತುವರಿಯು ನನ್ನ ಜಮೀನಿನ ಉತ್ತರ ದಕ್ಷಿಣವಾಗಿ 200-300 ಅಡಿಗಳಲ್ಲಿ ಮಧ್ಯ ಭಾಗದಲ್ಲಿ ಬರುತ್ತದೆ. ಸದರಿ ಒತ್ತುವರಿಯಾಗಿರುವ ವಿಸ್ತೀರ್ಣಕ್ಕೆ

This is a True Copy of the Court Records Online. Authenticated @ districts.ecourtsindia.com/cnr/KADG220005932013/truecopy/order-2.pdf

www.ecourtsindia.com

ಉತ್ತರ ಮತ್ತು ದಕ್ಷಿಣಕ್ಕೆ ನಮ್ಮದೆ ಆಸ್ತಿ ಬರುತ್ತದೆ. ಒತ್ತುವರಿ ಆಗಿರುವ ವಿಸ್ತೀರ್ಣದ ದಕ್ಷಿಣ ಭಾಗಕ್ಕೆ ಉತ್ತರ ದಕ್ಷಿಣವಾಗಿ 90 ಅಡಿ ಬರುತ್ತದೆ. ಒತ್ತುವರಿ ಆಗಿರುವ ವಿಸ್ತೀರ್ಣದ ಉತ್ತರ ಭಾಗಕ್ಕೆ ಉತ್ತರ ದಕ್ಷಿಣವಾಗಿ 50 ಅಡಿ ಬರುತ್ತದೆ. ನಮ್ಮ ಮತ್ತು ಪ್ರತಿವಾದಿಯ ಜಮೀನಿನ ದಕ್ಷಿಣ ಭಾಗಕ್ಕೆ ಸರ್ವೆ ನಂ.43 ಮತ್ತು 44 ರ ಜಮೀನು ಬರುತ್ತದೆ. ಪ್ರತಿವಾದಿಯ ನಿರ್ಮಿಸಿರುವ ಗೊಡೌನ್ ದಕ್ಷಿಣ ಭಾಗಕ್ಕೆ ಸರ್ವೆ ನಂ.43 ಅಂದರೆ ವೀರಪ್ಪ ಎಂಬುವವರ ಜಮೀನು ಬರುತ್ತದೆ. ಸದರಿ ವೀರಪ್ಪನವರ ಜಮೀನಿನ ಪಶ್ಚಿಮಕ್ಕೆ ನಮ್ಮ ಜಮೀನು ಬರುವುದಿಲ್ಲ. ದಾವಾ ಆಸ್ತಿಯ ದಕ್ಷಿಣದ ಅಂಚು ಮತ್ತು ಪ್ರತಿವಾದಿಯ ಸ್ವತ್ತಿನ ದಕ್ಷಿಣದ ಅಂಚು ಒಂದೇ ಸಮನಾಂತರದಲ್ಲಿದೆ. ಪ್ರತಿವಾದಿಗಳು ಕಟ್ಟಿರುವ ಗೊಡೌನ್ ನ ಉತ್ತರ ಭಾಗಕ್ಕೆ ಅವರ ವಾಸದ ಮನೆ ಇದೆ ಎಂದರೆ ಸರಿ. ಸದರಿ ಪ್ರತಿವಾದಿಯ ವಾಸದ ಮನೆ ಪಶ್ಚಿಮದ ಗೋಡೆಯು ಮತ್ತು ಗೊಡೌನ್ ಗೋಡೆಯ ಪಶ್ಚಿಮ ದಿಕ್ಕಿಗೆ ಹೊರ ಬಂದಿರುತ್ತದೆ ಎಂದರೆ ಸರಿ. ಈಗ ನೋಡುತ್ತಿರುವ ಛಾಯಚಿತ್ರವು ಸದರಿ ಗೊಡೌನ್ ಮತ್ತು ಮನೆಯ ವಸ್ತು ಸ್ಥಿತಿಯ ಛಾಯಚಿತ್ರ ಎಂದರೆ ಸರಿ. ಸದರಿ ಛಾಯಚಿತ್ರಗಳನ್ನು ಕ್ರಮವಾಗಿ ನಿಶಾನೆ ಡಿ 1 ರಿಂದ 3 ಎಂದು ಗುರುತಿಸಲಾಯಿತು. ಸದರಿ ನಿಶಾನೆ ಡಿ 3 ರಲ್ಲಿ ಕಾಣುತ್ತಿರುವ ಬೇಲಿ ಮತ್ತು ಬೇಲಿಯಿಂದ ಗೊಡೌನ್ ನ ಪಶ್ಚಿಮದ ಗೋಡೆ ನಡುವೆ ಎಷ್ಟು ಅಡಿ ಬರುತ್ತದೆ ಎಂದರೆ ಸಾಕ್ಷಿಯು 4-5 ಅಡಿ ಇರಬಹುದು ಎಂದು ನುಡಿಯುತ್ತಾರೆ. ನನ್ನ ವಾದ ಪತ್ರದಲ್ಲಿ ಹೇಳಿರುವಂತೆ ನಮ್ಮ ಮತ್ತು ಪ್ರತಿವಾದಿಗಳ ಜಮೀನಿನಲ್ಲಿ ತಂತಿ ಬೇಲಿ ಇದೆ ಎಂದರೆ ಸರಿ. ನಿಶಾನೆ ಡಿ 1 ರಿಂದ 3 ರಲ್ಲಿ ಕಾಣುವ ತಂತಿ ಬೇಲಿ ನಾನು ವಾದ ಪತ್ರದಲ್ಲಿ ಹೇಳಿರುವ ತಂತಿಬೇಲಿ ಎಂದರೆ ಸರಿ. ಪ್ರತಿವಾದಿ 2007-08 ನೇ ಸಾಲಿನಲ್ಲಿ ಸದರಿ ಛಾಯಚಿತ್ರದಲ್ಲಿ ಕಾಣುವ ಮನೆಯನ್ನು ಕಟ್ಟಿರುತ್ತಾರೆ. 2007-08 ನೇ ಸಾಲಿನಲ್ಲಿ ನಾನು ದಾವಾ ಸ್ವತ್ತನ್ನು ಖರೀದಿ ಮಾಡಿರಲಿಲ್ಲ. ಪ್ರತಿವಾದಿ ಮನೆ ನಿರ್ಮಿಸುವ ಕಾಲಕ್ಕೆ ನನ್ನ ಅಣ್ಣ ಕಲ್ಲಪ್ಪನವರ ಹೆಸನರಿಲ್ಲಿ ಇತ್ತು. ಪ್ರತಿವಾದಿ ಮನೆ ನಿರ್ಮಿಸುವ ಸಮಯದಲ್ಲಿ ಕಲ್ಲಪ್ಪನವರಗಾಲಿ ಅವರ ಮಕ್ಕಳಾಗಲೀ ತಕರಾರು ಮಡಿದ್ದರೆ ಎಂದರೆ ನನಗೆ ಗೊತ್ತಿಲ್ಲ.

ದಾವೆ ಸಲ್ಲಿಸಿದ ನಂತರ ಜಮೀನಿನ ಅಳತೆ ಮಾಡಲು ನ್ಯಾಯಾಲಯದಿಂದ ಕಮೀಷನರ್ ನೇಮಕ ಮಾಡಲು ಅರ್ಜಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ಅರ್ಜಿಯು ಪುರಸಕೃತವಾಗಿತ್ತ ಎಂದರೆ ಸರಿ. ನ್ಯಾಯಾಲಯದ ಆದೇಶದ ಮೇರೆಗೆ ಕಮೀಷನರ್ ರವರು 2017 ರಲ್ಲಿ ಜಮೀನಿನ ಅಳತೆಗೆ ಬಂದಿದ್ದರು.ಕಮೀಷನರ್ ರವರು ಜಮೀನಿನ ಅಳತೆಗೆ ಬಂದ ಸಮಯದಲ್ಲಿ ನಾನು ಮತ್ತು ನನ್ನ ಅಣ್ಣ

This is a True Copy of the Court Records Online. Authenticated @ districts.ecourtsindia.com/cnr/KADG220005932013/truecopy/order-2.pdf

ಹಾಗೂ ನಮ್ಮ ತೋಟದಲ್ಲಿ ಕೆಲಸ ಮಾಡುವ ಜನರು ಇದ್ದರು. ಸದರಿ ಸಮಯದಲ್ಲಿ ಸರ್ವೆ ನಂ.39 ನ್ನು ಅಳತೆ ಮಾಡಿ ನಂತರ 39/3 ನ್ನು ಅಳತೆ ಮಾಡಿರುತ್ತಾರೆ. ಸದರಿ ಸರ್ವೆ ನಂಬರ್ ನ ಪುರ್ವಕ್ಕಿರುವ ಸರ್ವೆ ನಂ.40 ನ್ನು ಅಳತೆ ಮಾಡಿರುವುದಿಲ್ಲ.ಅಳತೆ ಮಾಡುವ ಸಮಯದಲ್ಲಿ ನನ್ನ ತಮ್ಮ ಚಿತ್ರ ಶೇಖರಪ್ಪ ಮತ್ತು ಅವರ ಮಗ ಮಲ್ಲಿಕಾರ್ಜುನ ಹಾಜರಿದ್ದರು. ಅಳತೆ ಮಾಡುವ ಕಾಲಕ್ಕೆ ಸ್ಥಳದಲ್ಲಿ ನಕ್ಷೆ ತಯಾರಿಸಿರುವುದಿಲ್ಲ. ಸದರಿ ಸಮಯದಲ್ಲಿ ಕಮೀಷನರ್ ರವರು ಮಹಜರ್ ಗೆ ನನ್ನ ಸಹಿ ಪಡೆದಿರುತ್ತಾರೆ. ಸರ್ವೆಯರ್ ರವರು ಸರ್ವೆ ನಂ.39/3 ನ್ನು ಪೂರ್ಣವಾಗಿ ಅಳತೆ ಮಾಡಿರುವುದಿಲ್ಲ. ಪ್ರತಿವಾದಿಗಳ ಮನೆ ಮತ್ತು ಗೊಡೌನ್ ವರೆಗೆ ಮಾತ್ರ ಅಳತೆ ಮಾಡಿರುತ್ತಾರೆ. ಒತ್ತುವರಿ ಆಗಿರುವ ಜಾಗಕ್ಕೆ ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ದಾವಾ ಸರ್ವೆ ನಂಬರ್ ಜಮೀನು ಬರುತ್ತದೆ. ಸರ್ವೆ ಅಧಿಕಾರಿಗಳು ನನ್ನ ಜಮೀನಿನ ಉತ್ತರ ದಕ್ಷಿಣವಾಗಿ ಎಷ್ಟು ಅಡಿ ಒತ್ತುವರಿ ಆಗಿರುತ್ತದೆ ಎಂದು ತೋರಿಸಿರುವುದಿಲ್ಲ. ನಾನು ಕಮೀಷನರ್ ರವರು ಹಾಜರುಪಡಿಸಿರುವ ನಕ್ಷೆಯನ್ನು ನೋಡಿರುತ್ತೇನೆ. ಸದರಿ ಕಮೀಷನರ್ ರವರ ವರದಿಯಲ್ಲಿ ನಾನು ಹೇಳಿದ ಪ್ರಕಾರವಾಗಿ ಒತ್ತುವರಿಯಾಗಿದೆ ಎಂದು ನಮೂದು ಇಲ್ಲ ಎಂದರೆ ಸರಿಯಲ್ಲ. ಮಹಜರ್ ಸಮಯದಲ್ಲಿ ಮಲ್ಲಿಕಾರ್ಜುನ ಚಿತ್ರ ಶೇಖರಪ್ಪ ಸಹಿ ಮಾಡಿರುತ್ತಾರೆ ಅವರ ಜೊತೆ ಮತ್ತೊಬ್ಬರು ಸಹಿ ಮಾಡಿರುತ್ತಾರೆ ಅವರು ಯಾರು ಎಂದು ನನಗೆ ಗೊತ್ತಿಲ್ಲ. ಕಮೀಷನರ್ ವರದಿಯಲ್ಲಿನ ಹೇಳಿಕೆ ದಾಖಲೆಯಲ್ಲಿ ಯಾವ ದಿನಾಂಕ ಪಡೆಯಾಲಗಿದೆ ಎಂದು ನಮೂದು ಇಲ್ಲ ಎಂದರೆ ಸರಿ. ಸದರಿ ದಾಖಲೆಯಲ್ಲಿ ಹೆಬ್ಬೆಟ್ಟಿನ ಗುರುತು ನಮೂದು ಮಾಡಿಲ್ಲ ಎಂದರೆ ಸರಿ. ದಾವಾ ಅನುಸೂಚಿಯಲ್ಲಿ ತೋರಿಸಿರುವ ಒತ್ತುವರಿ ವಿಸ್ತೀರ್ಣಕ್ಕೂ ಕಮೀಷನರ್ ವರದಿಯಲ್ಲಿನ ವಿಸ್ತೀರ್ಣಕ್ಕೂ ವ್ಯತ್ಯಾಸ ಇದೆ ಎಂದರೆ ಸರಿ.

ಪ್ರತಿವಾದಿಯರು ಪ್ರಸ್ತುತ ದಾವೆ ಸಲ್ಲಿಸಿದ ನಂತರದಲ್ಲಿ ತಮ್ಮ ಜಮೀನಿನ ಪೂರ್ವ ಭಾಗದ ಜಮೀನನ್ನು ಸರ್ವೆ ಮಾಡಲು ಅರ್ಜಿ ನೀಡಿದ್ದು ಆ ಬಗ್ಗೆ ನನಗೆ ನೋಟಿಸು ದಿಃ10.02.2021 ರಂದು ಜಾರಿಯಾಗಿರುತ್ತದೆ ಎಂದರೆ ಸರಿ. ದಿಃ22.02.2021 ರಂದು ಸರ್ವೆ ಅಧಿಕಾರಿಗಳು ಪ್ರತಿವಾದಿಯವರ ಜಮೀನನ್ನು ಅಳತೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಳತೆಯ ಸಮಯದಲ್ಲಿ ಪ್ರತಿವಾದಿಯ ಜಮೀನಿನ ದಕ್ಷಿಣ ಪಶ್ಚಿಮದ ಮೂಲೆಯಲ್ಲಿ ಅರ್ಧ ಗುಂಟೆ ಜಮೀನನ್ನು ನಾವು ಒತ್ತುವರಿ ಮಾಡಿರುತ್ತೇವೆ ಎಂದು ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಯರು ಅವರ ಜಮೀನಿನಲ್ಲಿಯೇ ಗೊಡೌನ್ ಮತ್ತು ಮನೆಯನ್ನು ನಿರ್ಮಿಸಿದ್ದು ಸದರಿ ಗೊಡೌನ್ ಮತ್ತು ಮನೆಯ ಹಿಂಭಾಗದಲ್ಲಿ ಖಾಲಿ ಜಾಗವನ್ನು ಬಿಟ್ಟಿದ್ದರು ಅದನ್ನು ನಾವು ಒತ್ತುವರಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ದಾವಾದಲ್ಲಿ ಬರೆಸಿರುವ ತಂತಿ

This is a True Copy of the Court Records Online. Authenticated @ districts.ecourtsindia.com/cnr/KADG220005932013/truecopy/order-2.pdf

www.ecourtsindia.com

ಬೇಲಿಯನ್ನು ನಾವೇ ಪ್ರತಿವಾದಿಯ ಜಮೀನನ್ನು ಒತ್ತುವರಿ ಮಾಡಿ ಹಾಕಿರುತ್ತೇವೆ ಎಂದರೆ ಸರಿಯಲ್ಲ. ಕಮೀಷನರ್ ರವರು ವರದಿಯನ್ನು ಸ್ಥಳದಲ್ಲಿ ತಯಾರಿಸಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ಅಧಿಕಾರಿಯವರು ಅವರ ಕಚೇರಿಯಲ್ಲಿ ಕುಳಿತು ನಾನು ಹೇಳಿದಂತೆ ವರದಿ ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ ಎಂದರೆ ಸರಿ. ನನ್ನ ಆಸ್ತಿಯಲ್ಲಿ ಪ್ರತಿವಾದಿಯು ಯಾವುದೆ ಒತ್ತುವರಿ ಮಾಡದೆ ಇದ್ದರು ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ದಾವಾ ಆಸ್ತಿ ಒತ್ತುವರಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ಅಧಿಕಾರಿಗಳ ಜೊತೆ ಶಾಮೀಲ್ ಆಗಿ ಒತ್ತುವರಿ ಆಗಿರುವ ಬಗ್ಗೆ ಸುಳ್ಳು ದಾಖಲೆಯನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ನನ್ನ ಮತ್ತು ಪ್ರತಿವಾದಿಯವರ ನಡುವೆ ಒಡನಾಟ ಚೆನ್ನಾಗಿಲ್ಲ ಎಂದರೆ ಸರಿಯಲ್ಲ. ದಾವಾ ಸಲ್ಲಿಸಲು ಯಾವುದೆ ವ್ಯಾಜ್ಯ ಕಾರಣ ಉದ್ಭವಿಸದಿದ್ದರು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಒತ್ತುವರಿಯಾಗಿರುವ ನನ್ನ ಜಮೀನು ಗುಂಟೆಗೆ ಒಂದುವರೆ ಲಕ್ಷ ಬೆಲೆಬಾಳುತ್ತದೆ. ಪ್ರತಿವಾದಿಯ ಜಮೀನನ್ನು ನಾನು ಒತ್ತುವರಿ ಮಾಡಿದ್ದು ಸದರಿ ಒತ್ತುವರಿಯನ್ನು ಬಿಟ್ಟುಕೊಡಬೇಕಾಗಿ ಬರುತ್ತದೆ ಎಂದು ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯವರು ಗೊಡೌನ್ ಮತ್ತು ಮನೆ ನಿರ್ಮಿಸುವ ಸಮಯದಲ್ಲಿ ಅಳತೆ ಮಾಡಿಸಿಯೇ ಕಟ್ಟಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು.)

**ಓ.ಹೇ.ಕೇ. ಸರಿ ಇದೆ.**

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ

ಚನ್ನಗಿರಿ

This is a True Copy of the Court Records Online. Authenticated @ districts.ecourtsindia.com/cnr/KADG220005932013/truecopy/order-2.pdf

www.ecourtsindia.com